**ಟೀಚರ್:** ಗುಂಡಾ, ಮಂಡ್ಯ ಜಿಲ್ಲೆಯ ಒಂದು ಉತ್ಪನ್ನದ ಹೆಸರು ಹೇಳು.
ಎದ್ದು ನಿಂತ ಗುಂಡ, ತಲೆ ಕೆರದುಕೊಳ್ಳುತ್ತ, 'ಗೊತ್ತಿಲ್ಲ ಮೇಡಂ' ಎಂದ.
**ಟೀಚರ್:** ನಿನಗೆ ಒಂದು ಸುಳಿವು ಕೊಡ್ತೀನಿ. ನೀನು ಸಕ್ಕರೆ ಎಲ್ಲಿಂದ ತರುತ್ತಿ?
**ಗುಂಡ:** ನಾನು ಪಕ್ಕದ ಮನೆ ಪದ್ಮ ಆಂಟಿಯಿಂದ ತರುತ್ತೇನೆ.

***

ಒಬ್ಬ ಗಿರಾಕಿ ಅವಸರದಲ್ಲಿ ಓಡಿ ಬಂದು ಅಂಗಡಿಯವನಿಗೆ, 'ಒಂದು ದೊಡ್ಡ ಇಲಿ ಬೋನು ಕೊಡಿ. ಇನ್ನು ಹತ್ತು ನಿಮಿಷದಲ್ಲಿ ನಾನು ಬಸ್ಸು ಹಿಡಿಯಬೇಕಿದೆ' ಎಂದ.
**ಅಂಗಡಿಯಾತ:** ಕ್ಷಮಿಸಿ ಸಾರ್, ನಮ್ಮಲ್ಲಿ ಬಸ್ಸು ಹಿಡಿಯುವಂತಹ ಬೋನು ಇದ್ದ ಹಾಗಿಲ್ಲ.


***


**ಆತ:** ಇಂದು ಹಳೆ ಚಪ್ಪಲಿಗಳಿಗೆ ಭಾರಿ ಬೇಡಿಕೆ ಬಂದಿದೆ. ಜನರು ಬಡವರಾಗುತ್ತಿದ್ದಾರೆ. ಹಳೇ ಚಪ್ಪಲಿ ಕೊಂಡು ಜೀವಿಸಲಾರಂಭಿಸಿದ್ದಾರೆ.
**ಈತ:** ಹಾಗೇನೂ ಇಲ್ಲ. ಇಂದು ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನಾ ರ‍್ಯಾಲಿ ಇದೆ. ಅದಕ್ಕೆ ಇಷ್ಟು ಡಿಮ್ಯಾಂಡ್!

***

ವಿಧಾನಸೌಧದ ಮುಂದೆ ಟವಲ್‌ಗಳ ಮಾರಾಟ ಭರದಿಂದ ಸಾಗುತ್ತಿತ್ತು.
**ರಮೇಶ:** ಬಸ್‌ಸ್ಟ್ಯಾಂಡಿನಲ್ಲಿ ರೈಲ್ವೆ ಸ್ಟೇಷನ್‌ನಲ್ಲಿ ಕರ್ಚೀಫ್ ಮಾರಾಟ ಮಾಡೋದು ನೋಡಿದ್ದೆ, ಇಲ್ಲಿ ಟವಲ್ ಮಾರಾಟ ಯಾವ ಚಂದಕ್ಕೆ?
**ಸುರೇಶ:** ಇಲ್ಲಿ ಕುರ್ಚಿಗಳು ದೊಡ್ಡವು ಅಲ್ವಾ? ಅದಕ್ಕೆ ಕರ್ಚೀಫ್ ಹಾಕಿದರೆ ಸಾಲಲ್ಲ; ಹೀಗಾಗಿ ಟವಲ್ ಮಾರುತ್ತಿದ್ದಾರೆ.

ಸಂಗ್ರಹ: ಸದ್ಯೋಜಾತ, ಅಸಗೋಡು




**ನವವಧು:** ನನಗೆ ಚೆನ್ನಾಗಿ ಅಡುಗೆ ಮಾಡಲು ಬರುತ್ತದೆಂದು ನೀವೇಕೆ ನಿಮ್ಮ ಗೆಳೆಯರಿಗೆ ಹೇಳಿದಿರಿ?
**ಪತಿ:** ಇನ್ನೇನ್ಮಾಡಲಿ, ನಿನ್ನನ್ನು ಮದುವೆಯಾಗಿರುವುದಕ್ಕೆ ಏನಾದರೊಂದು ಕಾರಣ ನೀಡಬೇಕಿತ್ತಲ್ಲವೆ?

***

**ಮರಿ ಗುಂಡ:** ಅಪ್ಪಾ, ಹೊಸದಾಗಿ ಬಂದ ನಮ್ಮ ನೆರೆಮನೆಯವರು ತುಂಬಾ ಬಡವರು.
**ಗುಂಡ:** ನಿನಗೆ ಹೇಗೆ ತಿಳಿಯಿತು?
**ಮರಿ ಗುಂಡ:** ಅವರ ಮಗು ಒಂದೇ ಒಂದು ರೂಪಾಯಿಯ ನಾಣ್ಯ ನುಂಗಿತು, ಅಷ್ಟಕ್ಕೇ ಅವರಮ್ಮ ಅತ್ತೂ ಅತ್ತೂ ಕಂಗಾಲಾಗಿದ್ದಾರೆ!

***

ಪತ್ನಿ ತನ್ನ ಪತಿಯ ಬಳಿ ಆಕ್ಷೇಪದ ದನಿಯಲ್ಲಿ ಹೇಳುತ್ತಿದ್ದಳು 'ರೀ... ನಾನು ಕೆಲಸ ಮಾಡುತ್ತಿದ್ದಾಗ ನೀವು ನನ್ನಿಂದ ದೂರವೇ ಇದ್ದು ಬಿಡಿ...'
ಈ ಮಾತನ್ನು ಕೇಳಿಸಿಕೊಂಡ ಮನೆಗೆಲಸದ ನಿಂಗಿ ಅಂದಳು, 'ಚೆನ್ನಾಗಿ ಬುದ್ಧಿ ಹೇಳಿ ಅಮ್ಮಾವ್ರೇ... ನಾನಂತೂ ಹೇಳಿ ಹೇಳಿ ಸುಸ್ತಾಗಿದ್ದೇನೆ!'

***

**ಪತ್ನಿ** (ತವರು ಮನೆಯಿಂದ ಫೋನಿನಲ್ಲಿ): ರೀ... ನೀವು ಜೊತೆಯಿಲ್ಲದೆ ನಿಮ್ಮ ನೆನಪಿನಲ್ಲಿ ನಾನು 15 ದಿನಗಳಲ್ಲಿಯೇ ಅರೆಜೀವವಾಗಿದ್ದೇನೆ ಕಣ್ರೀ. ನನ್ನನ್ನು ಕರೆದೊಯ್ಯಲು ಯಾವಾಗ ಬರುತ್ತೀರಿ?
**ಪತಿ:** ಇನ್ನು 15 ದಿನಗಳ ನಂತರ ಕಣೆ!

***

**ನೆರೆಮನೆ ಹುಡುಗಿ:** ನೀನು ನನ್ನ ಜೊತೆ ಮದುವೆಯಾಗುವೆಯಾ?
**ಗುಂಡ:** ಇಲ್ಲ, ಸಾಧ್ಯವಿಲ್ಲ... ನಮ್ಮ ಮನೆಯಲ್ಲಿ ಎಲ್ಲರ ಮದುವೆ ಸಂಬಂಧಿಕರ ಜೊತೆಯೇ ಆಗಿದೆ. ಅಪ್ಪ ಅಮ್ಮನ ಜೊತೆ, ಮಾವ ಅತ್ತೆಯ ಜೊತೆ ಮತ್ತು ಅಣ್ಣ ಅತ್ತಿಗೆಯ ಜೊತೆ ಮದುವೆಯಾಗಿರುತ್ತಾರೆ!




ಮೊದಲ ಬಾರಿ ಹಾರಾಟ ನಡೆಸಿ ಹಿಂತಿರುಗಿದ ಮರಿ ಸೊಳ್ಳೆಗೆ ಅದರಮ್ಮ ಕೇಳಿತು, 'ಹೇಗಿತ್ತು ಹಾರಾಟ?'
**ಮರಿ ಸೊಳ್ಳೆ:** ಅದ್ಭುತವಾಗಿತ್ತಮ್ಮ, ನನ್ನ ಹಾರಾಟದ ಪರಿ ನೋಡಿ ಮಾನವ ಜಾತಿಯ ಮಂದಿಯೂ ನಾನು ಹೋದಲ್ಲೆಲ್ಲಾ ಖುಷಿಯಿಂದ ಬಾರಿ ಬಾರಿ ಚಪ್ಪಾಳೆ ತಟ್ಟುತ್ತಿದ್ದರು!

***

**ಪೇದೆ:** ನಡಿ, ನಿನ್ನ ಗಲ್ಲು ಶಿಕ್ಷೆಯ ಸಮಯವಾಯಿತು.
**ಕೈದಿ:** ಆದರೆ ನನ್ನ ಗಲ್ಲು ಶಿಕ್ಷೆಗೆ ಇನ್ನೂ ಇಪ್ಪತ್ತು ದಿನವಿದೆ.
**ಪೇದೆ:** ಜೈಲರ್ ಸಾಹೇಬರು ಹೇಳಿ ಹೋಗಿದ್ದಾರೆ, ನೀನು ಅವರ ಊರಿನವನಂತೆ. ಆದ್ದರಿಂದ ನಿನ್ನ ಕೆಲಸ ಮೊದಲು ಮಾಡಿ ಕೊಡ್ಬೇಕಂತೆ... ನಡಿ!

ಸಂಗ್ರಹ: ರಮಣ್ ಶೆಟ್ಟಿ ರೆಂಜಾಳ, ಮುಂಬೈ